ಅಸಲು ದಾವಾ ಸಂಖ್ಯೆ. 44/2013

ಪಿ.ಡ್ಬ್ಲ್ಯು ನಂ.1

**ಸಾಕ್ಷಿಯನ್ನು ದಿನಾಂಕಃ 23.11.2024 ರಂದು ಕರೆದು ಪ್ರಮಾಣ ವಚನ ಮಾಡಿಸಲಾಯಿತು.**

**ಪಾಟೀ ಸವಾಲು ಃ ಶ್ರೀ ಎ.ಎಸ್.ವಾಯ್., ಪ್ರತಿವಾದಿ ನಂ.6 ರ ಪರ ವಕೀಲರಿಂದಃ**

ನಾನು ಪಂಚಗಾಂವಿ ಊರಲ್ಲಿ ವಾಸಿಸುತ್ತೇನೆ. ನನ್ನ ಮದುವೆಯಾಗಿ 50 ವರ್ಷಗಳು ಆಗಿರಬಹುದು. ಮದುವೆ ಆದಾಗಿನಿಂದಲೂ ನಾನು ಪಂಚಗಾಂವಿ ಗ್ರಾಮದಲ್ಲಿ ಇದ್ದೇನೆ. ನನ್ನ ತಂದೆ ಫಕೀರಪ್ಪನ ಹೆಸರಲ್ಲಿ 18 ಎಕರೆ ಜಮೀನು ಇತ್ತು. ಒಂದೇ ನಂಬರ ಇದ್ದು ಅದು ಸರ್ವೆ ನಂ.88 ಆಗಿತ್ತು ಎಂದರೆ ಸರಿ. ಸದರಿ ಜಮೀನು ಕನಸಗೇರಿ ಗ್ರಾಮದಲ್ಲಿ ಇತ್ತು.

ನನ್ನ ತಂದೆ ಫಕೀರಪ್ಪ 1997 ನೇ ಸಾಲಿನಲ್ಲಿ ಮೃತನಾಗಿದ್ದಾನೆ ಎಂದರೆ ಸರಿ. ಆಗ ನಾನು ಮತ್ತು ನನ್ನ ಹೆಣ್ಣು ಮತ್ತು ಗಂಡು ಮಕ್ಕಳು ವಾರಸಾ ಆಗಲು ಅರ್ಜಿ ಕೊಟ್ಟಿದೇವು. ನನ್ನ ತಂದೆ ಫಕೀರಪ್ಪ ಮೃತನಾದ ನಂತರ ಸರ್ವೆ ನಂ.88 ರಲ್ಲಿನ ಜಮೀನು ಪ್ರತಿವಾದಿ ನಂ. 4 ಮತ್ತು 6 ರಿಗೆ ನಾನು ಮತ್ತು ನನ್ನ ಮಕ್ಕಳು ಬಿಟ್ಟು ಕೊಟ್ಟೇವು ಎಂದರೆ ಸರಿಯಲ್ಲ.

ನಾನು ಪ್ರತಿವಾದಿ ನಂ.4 ಮತ್ತು 6 ರಿಗೆ ಸರ್ವೆ ನಂ.88 ರಲ್ಲಿನ ಜಮೀನಿನಲ್ಲಿನ ಹಕ್ಕನ್ನು ಬಿಟ್ಟು ಕೊಟ್ಟಿದ್ದಕ್ಕೆ ನಿ.ಪಿ. 8 ರಂತೆ ಡೈರಿ ನಂ.1367 ಮಂಜೂರಾಗಿದೆ ಎಂದರೆ ಸರಿಯಲ್ಲ.

ನನ್ನ ತಂದೆ ಹೆಸರಲ್ಲಿದ್ದ ಒಂದು ಜಮೀನು ಬಿಟ್ಟು ಉಳಿದ ಎಲ್ಲ ಜಮೀನುಗಳನ್ನು ಪ್ರತಿವಾದಿ ನಂ.4 ಮತ್ತು 6 ಇವರು ತಮ್ಮ ಸ್ವಂತ ಆದಾಯದಿಂದ ಖರೀದಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಮುಂದುವರೆದು ಸಾಕ್ಷಿ ತನ್ನ ತಂದೆಗೆ ಎರಡು ಜಮೀನುಗಳು ಇವೆ ಎಂದು ನುಡಿಯುತ್ತಾರೆ.

ಸರ್ವೆ ನಂ.88 ಮಾತ್ರ ನನ್ನ ತಂದೆಯ ಆಸ್ತಿ ಹಾಗೂ ಉಳಿದ ಆಸ್ತಿಗಳು ಪ್ರತಿವಾದಿ ನಂ.4 ಮತ್ತು 6 ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ನನಗೆ ಯಾವುದೇ ಹಕ್ಕು ಮತ್ತು ಹಿತಾಸಕ್ತಿ ಇಲ್ಲದಿದ್ದರು ಸಹ ಪ್ರತಿವಾದಿ ನಂ.4 ಮತ್ತು 6 ರಿಗೆ ತೊಂದರೆ ಕೊಡಲು ಸುಳ್ಳು ದಾವೆ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

ದಾವಾ ಆಸ್ತಿಗಳಿಗೆ ಪ್ರತಿವಾದಿ ನಂ.4 ಮತ್ತು 6 ಇಬ್ಬರೆ ಕಬ್ಜಾ ವಹಿವಾಟಿಯಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ಸುಳ್ಳು ದಾವೆ ದಾಖಲಿಸಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು )

ಓ ಹೇ ಕೇ ಸರಿ ಇದೆ.

Sd/-

ಹೆಚ್ಚುವರಿ ದಿವಾಣಿ ನ್ಯಾಯಾಧೀಶರು

ಮುಧೋಳ.

ಸಾಕ್ಷಿಯ ಸಹಿ